**ದಿನಾಂಕ: 02.01.2021 ರಂದು ಸಮಯ 11.00 ಗಂಟೆಗೆ ವಾರ್ಡ್ 154-ಬಸವನಗುಡಿ ವಾರ್ಡಿಗೆ ಸಂಬಂಧಿಸಿದಂತೆ ವಿವಿಧ್ದೋದ್ದೇಶ ಕಟ್ಟಡದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

## ಹಾಜರಿದ್ದವರು

1. ಶ್ರೀ. ಮಂಜುನಾಥ ರೆಡ್ಡಿ, ವಾರ್ಡ್ ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷರು ವಾರ್ಡ್ 154
2. ಶ್ರೀ. ಆನಂದ.ಜಿ, ಕಿರಿಯ ಅಭಿಯಂತರರು, ವಾರ್ಡ್ ಸಂಖ್ಯೆ 154 ಹಾಗೂ ಸದಸ್ಯ ಕಾರ್ಯದರ್ಶಿ
3. ಶ್ರೀ. ನಾರಾಯಣ್. ಕಂದಾಯ ಪರಿವೀಕ್ಷಕರು, ವಾರ್ಡ್ 154
4. ಶ್ರೀ. ಮುನಿರಾಜು. ಕೆ, ಕಿರಿಯ ಅಭಿಯಂತರರು, BESCOM ವಾರ್ಡ್ 154
5. ಶ್ರೀ. ಕುಬೇಂದ್ರ, ಕಂದಾಯ ವಸೂಲಿಗಾರರು ವಾರ್ಡ್ 154
6. ಶ್ರೀ. ಬಿ.ಎಸ್. ಸತ್ಯನಾರಾಯಣ, ಮಾಜಿ ಸದಸ್ಯರು, ವಾರ್ಡ್-154.

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ಅಧಿಕಾರಿಗಳಿಗೆ ಸ್ವಾಗತವನ್ನು ಕೋರುತ್ತಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನೋಡಲ್ ಅಧಿಕಾರಿ ಹಾಗೂ ವಾರ್ಡ್ ಅಧ್ಯಕ್ಷರಾದ ಶ್ರೀ ಮಂಜುನಾಥ ರೆಡ್ಡಿ ರವರು ಪ್ರತಿ ತಿಂಗಳ ಮೊದಲನೇ/ಮೂರನೇ ಶನಿವಾರ ನಡೆಸಬೇಕೆಂದು ತಿಳಿಸಿರುವ ಮೇರೆಗೆ ದಿನಾಂಕ: 02.01.2021 ರಂದು ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

1) ನೋಡಲ್ ಅಧಿಕಾರಿಗಳು ಮಾತನಾಡಿ ಎನ್.ಆರ್. ಕಾಲೋನಿಯಲ್ಲಿರುವ ಬಿ.ಬಿ.ಎಂ.ಪಿ ವಿವಿಧ್ದೋದ್ದೇಶ ಕಟ್ಟಡದಲ್ಲಿ ವಿವಿಧ ಇಲಾಖೆಗಳಿಗೆ ಈಗಾಗಲೇ ಬಾಡಿಗೆಗೆ ಸ್ಥಳವನ್ನು ನೀಡಲಾಗಿದ್ದು, ಸದರಿ ಇಲಾಖೆಗಳಿಂದ ಬಾಡಿಗೆಯ ಕರಾರು ಪತ್ರ ಹಾಗೂ ಬಾಡಿಗೆಯನ್ನು ಇದುವರೆವಿಗೂ ಪಡೆದಿರುವುದಿಲ್ಲವೆಂದು ಮಾಜಿ ಸದಸ್ಯರು ಶ್ರೀ. ಬಿ.ಎಸ್. ಸತ್ಯನಾರಾಯಣ ರವರು ಸಭೆಯಲ್ಲಿ ತಿಳಿಸಿರುತ್ತಾರೆ. ಆದುದರಿಂದ ಸದರಿ ವಿಷಯವಾಗಿ ಕ್ರಮಕೈಗೊಳ್ಳಲು ಸಹಾಯಕ ಕಂದಾಯ ಅಧಿಕಾರಿ (ಮಾರುಕಟ್ಟೆ-ದಕ್ಷಿಣ) ರವರಿಗೆ ಕ್ರಮಕೈಗೊಳ್ಳಲು ಕೋರಲಾಗಿದೆ.

**ಕ್ರಮ: - ಸಹಾಯಕ ಕಂದಾಯ ಅಧಿಕಾರಿ (ಮಾರುಕಟ್ಟೆ-ದಕ್ಷಿಣ) ರವರಿಗೆ ಕ್ರಮಕೈಗೊಳ್ಳಲು ಕೋರಲಾಗಿರುತ್ತದೆ.**

2) ನೋಡಲ್ ಅಧಿಕಾರಿಗಳು ಮಾತನಾಡಿ 2ನೇ ಮುಖ್ಯರಸ್ತೆ ತ್ಯಾಗರಾಜನಗರ, ಗಂಗಮ್ಮ ದೇವಸ್ಥಾನದ ರಸ್ತೆ, ದತ್ತಾತ್ರೇಯ ದೇವಸ್ಥಾನದ ರಸ್ತೆ, ಮುನೇಶ್ವರ ರಸ್ತೆಗಳಲ್ಲಿ ಬೆಸ್ಕಾಂ HD ಕೇಬಲ್‌ಗಳನ್ನು ಅಳವಡಿಸಲು ಅಗೆದಿರುವ ರಸ್ತೆಗಳನ್ನು ಕೂಡಲೇ ದುರಸ್ಥಿ ಕೆಲಸವನ್ನು ಪೂರ್ಣಗೊಳಿಸಲು ಪ್ರತಿ ವಾರ್ಡ್ ಸಮಿತಿಯ ಸಭೆಯಲ್ಲಿ ತಿಳಿಸಿದ್ದರೂ ಸಹ ಇದುವರೆವಿಗೂ ಯಾವುದೇ ರೀತಿ ಕ್ರಮಗಳನ್ನು ಕೈಗೊಂಡಿರುವುದಿಲ್ಲ ಸಾರ್ವಜನಿಕರಿಂದ ದೂರುಗಳು ಬರುತ್ತಿದ್ದು ಶೀಘ್ರವಾಗಿ HD ಕೇಬಲ್‌ಗಳನ್ನು ಅಳವಡಿಸಲು ಅಗೆದಿರುವ ರಸ್ತೆ ಗುಂಡಿಗಳನ್ನು ಮುಚ್ಚಿ ಸಾರ್ವಜನಿಕರ ವಾಹನ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಈ ಮೂಲಕ ಕೋರಲಾಗಿದೆ. ಇದರಿಂದ ಯಾವುದೇ ರೀತಿಯ ಅನಾಹುತಗಳು ಸಂಭವಿಸಿದರೆ ತಾವೇ ನೇರ ಜವಾಬ್ದಾರರಾಗಿರುತ್ತೀರೆಂದು ಈ ಮೂಲಕ ತಿಳಿಸಲಾಗಿದೆ.

**ಕ್ರಮ: - ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿದ್ಯುತ್) ಅವಲಹಳ್ಳಿ ಉಪ ವಿಭಾಗ ಬೆಸ್ಕಾಂ ರವರಿಗೆ ಕ್ರಮ ವಹಿಸಲು ಕೋರಲಾಗಿರುತ್ತದೆ.**

3) ನೋಡಲ್ ಅಧಿಕಾರಿಗಳು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿರುವ ಬರುವ ರಸ್ತೆ ಗುಂಡಿಗಳನ್ನು ಶೀಘ್ರವಾಗಿ ಮುಚ್ಚಲು ಕ್ರಮ ಕೈಗೊಳ್ಳುವುದು ಹಾಗೂ 14ನೇ ಹಣಕಾಸಿನ ಅನುದಾನದಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ಶೀಘ್ರವಾಗಿ ಸಲ್ಲಿಸಿ ಕೆಲಸ ಪ್ರಾರಂಭಿಸಲು ಕ್ರಮಕೈಗೊಳ್ಳಲು ಸೂಚಿಸಲಾಗಿದೆ.

**ಕ್ರಮ:- ಕಿರಿಯ ಅಭಿಯಂತರರು, ವಾರ್ಡ್ 154**

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

6/01/21

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ 154-ಬಸವನಗುಡಿ

>>>>2

Scanned with CamScanner

<u>ಪ್ರತಿಯನ್ನು:</u>

1) ಮಾನ್ಯ ಆಯುಕ್ತರು ರವರ ಆಪ್ತ ಶಾಖೆಗೆ ಅವಗಾಹನೆಗೆ ತರಲು ಕಳುಹಿಸಿದೆ.
2) ವಲಯ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ.
3) ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ.
4) ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ,
5) ಕಾರ್ಯಪಾಲಕ ಅಭಿಯಂತರರು (ಬಸವನಗುಡಿ) /ಸ.ಕಾ.ನಿ.ಅ (ಬ.ಗು) ಉಪವಿಭಾಗ ರವರ ಅವಗಾಹನೆಗೆ.
6) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿದ್ಯುತ್) ಅವಲಹಳ್ಳಿ ಉಪ ವಿಭಾಗ ರವರ ಅವಗಾಹನೆಗೆ.
7) ಸಹಾಯಕ ಕಂದಾಯ ಅಧಿಕಾರಿಗಳು (ಮಾರುಕಟ್ಟೆ-ದಕ್ಷಿಣ) ರವರ ಅವಗಾಹನೆಗೆ.
8) ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಮುಂದಿನ ಕ್ರಮಕ್ಕಾಗಿ.
9) ಕಛೇರಿ ಕಡತಕ್ಕೆ.

Scanned with CamScanner